ಆ) ಸಂಖ್ಯೆ ಗ್ರಾಅಪ:14:ಐಎವೈ:99, ದಿನಾಂಕ 11-1-2000ರ ಸುತ್ತೋಲೆಯಲ್ಲಿ ವಿವರವಾಗಿ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಅವ್ಯವಹಾರ ನಡೆದಿರುವ ಬಗ್ಗೆ ದಿನಾಂಕ 13-5-2003ರ ಸರ್ಕಾರದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಯಚೂರು ರವರಿಂದ ಕೋರಲಾಗಿದೆ.

ಧಾರವಾಡ ಜಿಲ್ಲೆಯ ಖಾಸಗಿ ಪ್ರಾಥಮಿಕ ಶಾಲಾ ಮಕ್ಕಳು ಬಿಸಿಯೂಟ ನೀಡಬೇಕೆಂದು ಪ್ರತಿಭಟನೆ ಮಾಡುತ್ತಿರುವ ಬಗ್ಗೆ

2919 (3175) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಾದ್ಯಂತ .ಖಾಸಗಿ ಪ್ರಾಥಮಿಕ ಶಾಲಾ ಮಕ್ಕಳು ಮಧ್ಯಾಹ್ನದ ಬಿಸಿ ಊಟ ನಮಗೂ ಬೇಕೆಂದು ಪ್ರತಿಭಟಿಸಿ ಮೆರವಣಿಗೆ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಖಾಸಗಿ ಪ್ರಾಥಮಿಕ ಶಾಲೆಗಳಿಗೂ ಸಹ ಮಧ್ಯಾಹ್ನದ ಬಿಸಿ ಊಟದ ಯೋಜನೆ ಒಳಪಡಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಇ) ಸರ್ಕಾರಿ ಖಾಸಗಿ ಶಾಲೆಗಳಲ್ಲಿ ಮಕ್ಕಳು ಎಲ್ಲರೂ ಒಂದೇ ಎಂಬ ಸಮಭಾವನೆಯಿಂದ ಖಾಸಗಿ ಶಾಲಾ ಮಕ್ಕಳಿಗೂ ಮಧ್ಯಾಹ್ನದ ಬಿಸಿ ಊಟದ ವ್ಯವಸ್ಥೆ ಮಾಡುವುದು ಯೋಗ್ಯವೇ;

ಈ) ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ.

ಆ) ಸರ್ಕಾರದ ಗಮನದಲ್ಲಿದ್ದಾಗ್ಯೂ ರಾಜ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನಲೆಯಲ್ಲಿ ಇದು ಸಧ್ಯಕ್ಕೆ ಸಾಧ್ಯವಾಗುತ್ತಿಲ್ಲ.

ಇ) ಯೋಗ್ಯವಿದ್ದಾಗ್ಯೂ ಸಧ್ಯದಲ್ಲಿ ಇವರುಗಳಿಗೆ ವಿಸ್ತರಿಸಲು ಸರ್ಕಾರದ ಮುಂದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳು

2920 (3289) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರುಗಳ, ಶುಶ್ರೂಷಕಿಯರ ಪ್ರಯೋಗಾಲಯ ತಜ್ಞರುಗಳ, ಗುಮಾಸ್ತರ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) 1-1-2001 ರಿಂದ 30-5-2003ರ ವರೆಗೆ ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ಯಾವ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 451 ವೈದ್ಯರುಗಳು, 543 ಶುಶ್ರೂಷಕಿಯರು, 1252 ಪ್ರಯೋಗಶಾಲಾ ತಂತ್ರಜ್ಞರು, 885 ಗುಮಾಸ್ತರ ಹುದ್ದೆಗಳು ಖಾಲಿ ಇರುತ್ತವೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ).

ಆ) 1-1-2001 ರಇಂದ 30-5-2003ರವರೆಗೆ ವಿಶೇಷ ನೇರ ನೇಮಕಾತಿ ಸಮಿತಿ ಮೂಲಕ ಮತ್ತು ಗುತ್ತಿಗೆ ಆಧಾರದ ಮೇಲೆ ಒಟ್ಟು 770 ವೈದ್ಯರನ್ನು ನೇಮಕಾತಿ ಮಾಡಲಾಗಿದೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ).

ವೈದ್ಯಾಧಿಕಾರಿ, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು ಗುಮಾಸ್ತರ ಖಾಲಿ ಹುದ್ದೆಗಳ ವಿವರ ಮತ್ತು ದಿನಾಂಕ 1-1-2001 ರಿಂದ 31-5-03 ರವರೆಗೆ ವೈದ್ಯಾಧಿಕಾರಿಗಳ ನೇಮಕಾತಿ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಖಾಲಿ ಹುದ್ದೆಗಳ ವಿವರಗಳು				ದಿನಾಂಕ 1-1-01 ರಿಂದ 31-5-03ರ ವರೆಗೆ ವೈದ್ರಯ ನೇಮಕಾತಿ (ಖಾಯಂ ಗುತ್ತಿಗೆ)
		ವೈದ್ಯರು	ಶುಶ್ರೂಷಕ	ಪ್ರಯೋಗ ಶಾಲಾ ತಂತ್ರಜ್ಞರು	ಗುಮಾಸ್ತ	
1	2	3	4	5	6	7
1.	ಬೆಂಗಳೂರು ನಗರ	18	10	71	08	9+3 = 12
2.	ಬೆಂಗಳೂರು ಗ್ರಾಮಾಂತರ	4	14	43	22	19+0 = 19
3.	ಚಿತ್ರದುರ್ಗ	11	05	32	26	26+15 = 41
4.	ದಾವಣಗೆರೆ	20	10	45	29	9+9 = 18
5.	ಕೋಲಾರ	28	46	48	45	34+8 = 42
6.	ಶಿವಮೊಗ್ಗ	28	04	60	24	22+9 = 31
7.	ತುಮಕೂರು	8	10	90	44	33+11 = 44
8.	ಬಾಗಲಕೋಟೆ	9	05	27	25	23+5 = 28
9.	ಬೆಳಗಾಂ	21	08	91	72	27+22 = 49
10.	ಬಿಜಾಪುರ	24	04	27	19	18+3 = 21
11.	ಧಾರವಾಡ	2	05	34	0	14+9 = 23
12.	ಗದಗ	13	03	25	37	13+3 = 16
13.	ಹಾವೇರಿ	15	10	30	39	33+13 = 46
14.	ಉತ್ತರ ಕನ್ನಡ (ಕಾರವಾರ)	29	13	40	53	17+5 = 22
15.	ಬಳ್ಳಾರಿ	32	37	67	35	16+12 = 28
16.	ಬೀದರ್	9	46	22	25	8+19 = 27
17.	ಗುಲ್ಬರ್ಗಾ	37	112	56	37	21+32 = 53
18.	ಕೊಪ್ಪಳ	11	31	42	34	15+15 = 30
19.	ರಾಯಚೂರು	18	66	40	39	11+12 = 23
20.	ಚಾಮರಾಜನಗರ	9	14	33	35	6+8 = 14
21.	ಚಿಕ್ಕಮಗಳೂರು	15	13	32	38	11+5 = 16
22.	ದಕ್ಷಿಣ ಕನ್ನಡ	23	01	64	60	15+10 = 25

1	2	3	4	5	6	7
23.	ಹಾಸನ	14	15	50	20	28+12 = 40
24.	ಕೊಡಗು	33	01	18	31	8+7 = 15
25.	ಮಂಡ್ಯ	6	50	41	38	11+2 = 13
26.	ಮೈಸೂರು	10	10	82	31	28+4 = 32
27.	ಉಡುಪಿ	4	–	42	31	32+10 = 42
	ಒಟ್ಟು	**451**	**543**	**1252**	**885**	**507+263 = 770**

ಶಿವಮೊಗ್ಗ ಜಿಲ್ಲೆಯಲ್ಲಿ ಕಾಣಿಸಿಕೊಂಡಿರುವ ಮಂಗನ ಕಾಯಿಲೆ ಕುರಿತು

2924(2912) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತೆ ಮಂಗನ ಕಾಯಿಲೆ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದರೆ, ಈ ಕಾಯಿಲೆಗೆ ಪೀಡಿತರಾದ ರೋಗಿಗಳ ಸಂಖ್ಯೆ ಎಷ್ಟು:

ಇ) ಈ ರೋಗಿಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆಯೇ:

ಈ) ಈ ಕಾಯಿಲೆ ಹರಡದಂತೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) 46 ರೋಗಿಗಳು, (ಶಿವಮೊಗ್ಗ)

ಇ) ಹೌದು.

ಈ) 1) ರೋಗ ಪೀಡಿತ ಪ್ರದೇಶದ ಜನರಿಗೆ ಲಸಿಕೆ ನೀಡಲಾಗುತ್ತಿದೆ.

2) ತಾತ್ಕಾಲಿಕ ಆಸ್ಪತ್ರೆ ತೆರೆದು ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಹೆಚ್ಚಿನ ಚಿಕಿತ್ಸೆಗಾಗಿ ದೊಡ್ಡ ಆಸ್ಪತ್ರೆಗಳಾದ ಎನ್.ಆರ್. ಪುರ ಮತ್ತು ಕೊಪ್ಪ ಇಲ್ಲಿಗೆ ಅಂಬುಲೆನ್ಸ್ ಮೂಲಕ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ.

3) ಸಾಕಷ್ಟು ಸಂಖ್ಯೆಯ ಹಾಸಿಗೆಗಳ ಮತ್ತು ಅವಶ್ಯವಿರುವ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಾಸ್ತಾನು ಇಡಲಾಗಿದೆ.

4) ಕಾಡಿಗೆ ಹೋಗುವ ಜನರಿಗೆ ಮೈಗೆ ಹಚ್ಚಿಕೊಳ್ಳುವ ಮೈಲಾಲ್ ದ್ರಾವಣವನ್ನು ವಿತರಿಸಲಾಗಿದೆ.

5) ಮಂಗಗಳು ಸತ್ತ ಸ್ಥಳದಲ್ಲಿ 50 ಮೀಟರ್ ಸುತ್ತ ಮುತ್ತ ಮೆಲಾಥಿಯಾನ್ ಕೀಟನಾಶಕಗಳನ್ನು ಸಿಂಪಡಿಸಲಾಗುತ್ತಿದೆ.

6) ಜನರಿಗೆ ಕಾಯಿಲೆ ಬಗ್ಗೆ ಕರಪತ್ರಗಳ ಮೂಲಕ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

7) ಪ್ರತಿದಿನ ರೋಗಪೀಡಿತ ಪ್ರದೇಶಗಳಲ್ಲಿ ಸಮೀಕ್ಷೆ ನಡೆಯುತ್ತಿದೆ.